ಓ ಎಸ್ ನಂ.67/2024
ಪಿ.ಡಬ್ಲ್ಯೂ-1 ಪ್ರಿಯಾಂಕಾ ಗಂಡ ಮಲ್ಲೇಶಪ್ಪ ಮೇಲಗಿರಿ

(ಇಂದು ದಿನಾಂಕಃ 16-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಜಿ ಪಿ ವಕೀಲರಿಂದ.

ನನ್ನ ಅಜ್ಜಿಯ ಹೆಸರು ಪಾರ್ವತಿ ಇರುತ್ತದೆ. ನನ್ನ ಅಜ್ಜಿಯ ಹೆಸರಿನಲ್ಲಿ ೫ ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಅದರಲ್ಲೂ ಕೂಡಾ ನನಗೆ ಪಾಲು ಬರಬೇಕು ಎಂದರೆ ಸರಿ. ಸದರಿ ಜಮೀನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನು ಇನ್ನೂ ನಮ್ಮ ಅಜ್ಜಿಯ ಹೆಸರಿನಲ್ಲಿ ಇರುತ್ತದೆ ಎನ್ನುತ್ತಾರೆ. ನನ್ನ ಅಜ್ಜಿಯ ಹೆಸರಿನಲ್ಲಿರುವ ಜಮೀನೂ ಕೂಡ ನಮ್ಮ ಹಿರಿಯರಿಂದ ಬಂದಿರುತ್ತದೆ ಎಂದರೆ ಸರಿ. ನನ್ನ ಗಂಡ ಸಾಫ್ಟವೇರ್ ಇಂಜೀನಿಯರ ಇರುತ್ತಾರೆ ಎಂದರೆ ಸರಿ. ನನ್ನ ಮದುವೆಯಲ್ಲಿ ನನಗೆ ಮತ್ತು ನನ್ನ ಗಂಡನಿಗೆ ಸೇರಿ ೧೦ ತೊಲೆ ಬಂಗಾರ ನೀಡಿರುತ್ತಾರೆ. ನನ್ನ ಮದುವೆಗೆ ಬೇಕಾದ ೧೦ ತೊಲೆ ಬಂಗಾರವನ್ನು ನಮ್ಮ ಮನೆಯವರು ಜಮೀನನ್ನು ೪ನೇ ಪ್ರತಿವಾದಿಯ ಗಂಡ ಶಂಕರರವರಿಗೆ ಮಾರಾಟ ಮಾಡಿ ಬಂದ ಹಣದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಮದುವೆಯ ಮುಂಚೆ ಕೆಲಸ ಮಾಡುತ್ತಿದ್ದೆ ಎನ್ನುತ್ತಾರೆ. ನನಗೆ ಮೂವತ್ತು ಸಾವಿರ ರೂಪಾಯಿ ಸಂಬಳ ಇತ್ತು, ನಾನು ೪ ವರ್ಷ ಕೆಲಸ ಮಾಡಿರುತ್ತೇನೆ. ನನಗೆ ತಿಂಗಳಿಗೆ ೫-೬ ಸಾವಿರ ರೂಪಾಯಿ ಮಾತ್ರ ಖರ್ಚು ಆಗುತ್ತಿತ್ತು.

೨. ನನ್ನ ಮದುವೆಯ ಖರ್ಚಿಗಾಗಿ ನಮ್ಮ ತಂದೆ-ತಾಯಿ ಜಮೀನನ್ನು ೪ನೇ ಪ್ರತಿವಾದಿ ಮಲ್ಲಮ್ಮ ಗಂಡ ಶಂಕರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮದುವೆಯನ್ನು ನನ್ನ ಗಂಡನ ಮನೆಯವರು ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ನನ್ನ

ಮದುವೆಗೆ ಬೇಕಾದ ಬಂಗಾರವನ್ನು ೪ನೇ ಪ್ರತಿವಾದಿಯಿಂದ ಹಣವನ್ನು ಪಡೆದುಕೊಂಡು ನಮ್ಮ ತಂದೆ-ತಾಯಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕಾಕನ ಹೆಸರು ರಾಜಶೇಖರ ಇರುತ್ತದೆ. ನಮ್ಮ ತಂದೆಗೆ ೩ ಜನ ಸಹೋದರರು ಇರುತ್ತಾರೆ. ನಮ್ಮ ಮನೆತನಕ್ಕೆ ೧೬ ಎಕರೆ ಜಮೀನು ಮತ್ತು ನಮ್ಮ ಅಜ್ಜಿಯ ಹೆಸರಿನಲ್ಲಿ ಇರುವ ೫ ಎಕರೆ ಜಮೀನು ಇರುತ್ತವೆ. ನಮ್ಮ ತಂದೆ ಕಲಬುರಗಿಯಲ್ಲಿ ಮನೆ ಕಟ್ಟಿಸಲು ೪ನೇ ಪ್ರತಿವಾದಿಯಿಂದ ಹಣ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಕಲಬುರಗಿಯಲ್ಲಿ ಇರುವ ಮನೆ ೬೦ ರಿಂದ ೭೦ ಲಕ್ಷ ಇದೆ ಎಂದರೆ ಸಾಕ್ಷಿಯು ೫೦ ಲಕ್ಷ ಇರಬಹುದು ಎನ್ನುತ್ತಾರೆ. ಸದರಿ ಮನೆಯನ್ನು ನನ್ನ ತಮ್ಮ ಕಟ್ಟಿಸಿರುತ್ತಾನೆ. ನನ್ನ ತಮ್ಮ ಇಂಜೀನಿಯರ ಇರುತ್ತಾನೆ.

೩. ನಮ್ಮ ಮನೆತನಕ್ಕೆ ೨೮ ಎಕರೆ ೧೫ ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮ ಇಂಜೀನಿಯರ ಆಗಿ ಈಗ ೪-೫ ವರ್ಷಗಳಾಗಿರುತ್ತವೆ. ಕಲಬುರಗಿಯಲ್ಲಿರುವ ಪ್ಲಾಟನ್ನು ಖರೀದಿಸಿ ಸುಮಾರು ೧೫ ವರ್ಷ ಮೇಲೆ ಆಗಿರುತ್ತದೆ. ಕಲಬುರಗಿಯಲ್ಲಿರುವ ಪ್ಲಾಟಿನಲ್ಲಿ ಮನೆಯನ್ನು ಕಟ್ಟಿಸಲು ೪ನೇ ಪ್ರತಿವಾದಿಯಿಂದ ನಮ್ಮ ತಂದೆ ಹಣ ಪಡೆದು ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ೪ನೇ ಪ್ರತಿವಾದಿ ನಮ್ಮ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ೪ನೇ ಪ್ರತಿವಾದಿಯ ಗಂಡ ನನ್ನ ಮದುವೆ ಮೂರು ಲಕ್ಷ ಹಣ ಸಾಲ ನೀಡುತ್ತೇನೆ ಎಂದು ಹೇಳಿದರೂ ಸಹ ನಮ್ಮ ತಂದೆ ನಮಗೆ ಹೆಚ್ಚಿನ ಹಣ ಬೇಕು ನಾವು ಜಮೀನನ್ನೆ ಮಾರಾಟ ಮಾಡುತ್ತೇವೆ ಎಂದು ಹೇಳಿ ಹಣವನ್ನು ಪಡೆದು, ೪ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

೪. ನಾವು ೪ನೇ ಪ್ರತಿವಾದಿಗೆ ಹಣವನ್ನು ನೀಡುತ್ತೇವೆ ನಮ್ಮ ಜಮೀನು ನಮಗೆ ಇರಲಿ ಎಂದು ನಾನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆ-ತಾಯಿ ನಮ್ಮ ಜಮೀನು

ನಮಗೆ ಇರಲಿ ನಾವು ಹಣವನ್ನು ಮರಳಿ ಕೊಡುತ್ತೇವೆ ಎಂದು ಮಾತನಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಜಮೀನನ್ನು ಉಳಿಸಿಕೊಳ್ಳುವ ಸಲುವಾಗಿ ಹಣವನ್ನು ಮರಳಿ ನೀಡುವುದಾಗಿ ಮಾತುಕತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ವಿಚಾರವನ್ನು ನಮ್ಮ ತಂದೆ-ತಾಯಿಗೂ ಕೂಡಾ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಕಾರಣ ಇರದೆ ಇದ್ದುದರಿಂದ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.